ವಿಜಯವಾಣಿ
ಕನ್ನಡಿಗರ ಧ್ವನಿ

# ಅಖಿಲ ಭಾರತ ವಿಐಇ-2014 ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

**ಬೆಂಗಳೂರು:** ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡ 'ಅಖಿಲ ಭಾರತ ವಿಐಇ-2014 ಕ್ರೀಡಾಕೂಟ'ದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಫೆಬ್ರವರಿ 16 ರಿಂದ 19ರವರೆಗೆ ನಡೆದ ಕ್ರೀಡಾಕೂಟದಲ್ಲಿ ಜೈನ್ ವಿವಿ 5 ವಿಭಾಗಗಳಲ್ಲಿ ಪ್ರಥಮ ಹಾಗೂ 2 ವಿಭಾಗಗಳಲ್ಲಿ ದ್ವಿತೀಯ ಪ್ರಶಸ್ತಿ ಪಡೆಯಿತು. ಈಜು (ಪುರುಷರ ಹಾಗೂ ಮಹಿಳಾ ವಿಭಾಗ), ಟೆನಿಸ್ (ಮಹಿಳಾ ವಿಭಾಗ), ಟಿಟಿ (ಮಹಿಳಾ ವಿಭಾಗ), ಬ್ಯಾಡ್ಮಿಂಟನ್ (ಮಹಿಳಾ ವಿಭಾಗ), ಬಾಸ್ಕೆಟ್‌ಬಾಲ್ (ಮಹಿಳಾ ವಿಭಾಗ)ನಲ್ಲಿ ಪ್ರಥಮ ಮತ್ತು ಪುರುಷರ ವಿಭಾಗದ ಬಾಸ್ಕೆಟ್‌ಬಾಲ್ ಹಾಗೂ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ ಪಡೆಯಿತು. ಇದರೊಂದಿಗೆ ಸತತ 15ನೇ ಬಾರಿ ಈ ಕ್ರೀಡಾಕೂಟದಲ್ಲಿ ಜೈನ್ ವಿವಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದೆ.

**ಬಾಸ್ಕೆಟ್‌ಬಾಲ್:** ಮಹಿಳಾ ವಿಭಾಗದ ಫೈನಲ್ ಪಂದ್ಯದಲ್ಲಿ ಜೈನ್ ವಿವಿ 60-47 ರಿಂದ ಚೆನ್ನೈನ ಹಿಂದುಸ್ಥಾನ್ ವಿವಿ ವಿರುದ್ಧ ಗೆಲುವು ಪಡೆಯಿತು. ಪುರುಷರ ವಿಭಾಗದಲ್ಲಿ ಜೈನ್ ವಿವಿ 88-94 ರಿಂದ ಚೆನ್ನೈನ ಹಿಂದುಸ್ಥಾನ ವಿವಿ ತಂಡದ ಎದುರು ಸೋಲನುಭವಿಸಿ 2ನೇ ಸ್ಥಾನ ಪಡೆಯಿತು.

**ಬ್ಯಾಡ್ಮಿಂಟನ್:** ಪುರುಷರ ವಿಭಾಗದಲ್ಲಿ ಬೆಂಗಳೂರಿನ ಸುರಾನ ಕಾಲೇಜು ತಂಡ 3-1 ರಿಂದ ಜೈನ್ ವಿವಿ ವಿರುದ್ಧ ಗೆದ್ದರೆ, ಮಹಿಳಾ ವಿಭಾಗದಲ್ಲಿ ಜೈನ್ ವಿವಿ 3-0 ಯಿಂದ ಎಸ್‌ಎಸ್‌ಎನ್ ಇಂಜಿನಿಯರಿಂಗ್ ಕಾಲೇಜು ವಿರುದ್ಧ ಜಯ ದಾಖಲಿಸಿತು. **ಈಜು:** ಪುರುಷರ ಹಾಗೂ ಮಹಿಳಾ ವಿಭಾಗದಲ್ಲಿ ಪಾರಮ್ಯ ಮೆರೆದ ಜೈನ್ ವಿವಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.




'ಫೆಬ್ರವರಿ 16 ರಿಂದ 19ರವರೆಗೆ ನಡೆದ ಅಖಿಲ ಭಾರತ ವಿಐಇ-2014 ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಜೈನ್ ವಿವಿ ತಂಡ. ಚಿತ್ರದಲ್ಲಿ ಡಾ.ಯುವಿ ಶಂಕರ್ (ಕ್ರೀಡಾ ನಿರ್ದೇಶಕರು, ಜೈನ್ ವಿವಿ), ಪ್ರೀತಮ್ (ಕ್ರೀಡಾ ಕಾರ್ಯದರ್ಶಿ), ಡಾ ಮಹದೇವನ್ (ದೈಹಿಕ ಶಿಕ್ಷಣ ನಿರ್ದೇಶಕರು, ಮದ್ರಾಸ್ ವಿವಿ), ಡಾ.ಬಿಟಿ ವೆಂಕಟೇಶ್ (ಪರೀಕ್ಷಾ ನಿಯಂತ್ರಕ, ಜೈನ್ ವಿವಿ), ಅಮೃತಾ ಮಾನೆ (ಕ್ರೀಡಾ ಕಾರ್ಯದರ್ಶಿ).